ಶ್ರೀ ಬಿ.ಎಸ್. ಯಡಿಯೂರಪ್ಪ: ಆಗಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್ವಾನುಮತದಿಂದ ಅಂತ ಮಾಡಬಹುದು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾಪ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಪ್ರಸ್ತಾವ ಏನೆಂದರೆ:–

ಅಧ್ಯಕ್ಷರು: "ಖಂಡ 2 ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಮತ್ತು ಹಣಕಾಸು): ಮಾನ್ಯ ಅಧ್ಯಕ್ಷರೆ, "2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು)"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು

(ಈ) ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅನುಬಂಧ – IV

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡೆಪ್ಯುಟಿ ಕಮಿಶನರ್ ಮತ್ತು ಬೆಂಗಳೂರು ಜಿಲ್ಲೆಯ ಡೆಪ್ಯುಟಿ ಕಮಿಶನರ್ ಹೊರತುಪಡಿಸಿ ಎಂದು ಹೇಳಿರುವ ಒಂದು ಚಿಕ್ಕದಾದ ತಿದ್ದುಪಡಿ ಇದಾಗಿದೆ. ಈಗ ಭೂ ಮಂಜೂರಾತಿ ಆಗುವಂಥ ಸಂದರ್ಭಗಳಲ್ಲಿ ಎಲ್ಲಾ ಮಂಜೂರಾತಿ ವಿವರಗಳನ್ನು ಕೂಡ ಕಡತಗಳು ಸರ್ಕಾರದ ಮಟ್ಟದಲ್ಲಿ ಬರುತ್ತವೆ. ಅದರ ಬದಲು ಅರ್ಧ ಹೆಕ್ಟಾರ್‌ನಷ್ಟು ಅಂದರೆ ಒಂದೂಕಾಲು ಎಕರೆಯಷ್ಟು ಭೂಮಿಯನ್ನು ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ, ಈ ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಹೊರತುಪಡಿಸಿ ಉಳಿದಂಥವರಿಗೆ ಈ ಅಧಿಕಾರವನ್ನು ಅವರಿಗೇ ಕೊಡತಕ್ಕಂಥದ್ದು ಎನ್ನುವಂಥ ಸರಳವಾದಂಥ ಒಂದು ತಿದ್ದುಪಡಿ ವಿಧೇಯಕವಿದೆ. ತಮ್ಮ ಮೂಲಕವಾಗಿ ಇಡೀ ಸದನವನ್ನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ವಿನಂತಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಆಗಬಹುದು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕ 2004 ಅನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಖಂಡ 2 ಹಾಗೂ 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಹಾಗೂ 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"2004ರ ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು

(ಉ) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅನುಬಂಧ – V

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಇದೂ ಕೂಡ ಒಂದು ಸರಳವಾದ ತಿದ್ದುಪಡಿ ಇರುವಂಥದ್ದೇ ಆಗಿದೆ. ಭೂ ಸ್ವಾಧೀನ ಪ್ರಕ್ರಿಯೆ ಆದಂಥ ಸಂದರ್ಭಗಳಲ್ಲಿ ಶೇಕಡ 9 ರಷ್ಟು ಬಡ್ಡಿಯನ್ನು ನಷ್ಟ ಪರಿಹಾರದ ಮೇಲೆ ಬಡ್ಡಿಯನ್ನು ಸಂದಾಯ ಮಾಡಲು ಡೆಪ್ಯುಟಿ ಕಮಿಶನರ್‌ರವರಿಗೆ ನಿರ್ದೇಶನವನ್ನು ಮಾಡತಕ್ಕಂಥ ಸಂದರ್ಭಗಳಲ್ಲಿ ಹೆಚ್ಚಿನ ಮೊಬಲಗನ್ನು ನ್ಯಾಯಾಲಯದಲ್ಲಿ ಕೊಡಬೇಕು ಎಂದು ಅಭಿಪ್ರಾಯ ಪಟ್ಟು ತೀರ್ಮಾನವನ್ನು ಕೊಟ್ಟಂಥ ಸಂದರ್ಭಗಳಲ್ಲಿ ಸಂದಾಯ ಮಾಡುವಂಥ ದಿನಾಂಕದವರೆಗೆ ಅಥವಾ ಹೆಚ್ಚಿನ ಮೊಬಲಗು ಶೇಕಡ 9ರ ದರದಲ್ಲಿ ಬಡ್ಡಿ ಇರುತ್ತದೆ. ಅದನ್ನು 6ಕ್ಕೆ ಇಳಿಸಬೇಕು, ಇದೇ ರೀತಿ ಶೇಕಡ 15ರಷ್ಟು ಬಡ್ಡಿ ಇರುವುದನ್ನು ಶೇಕಡ 9ಕ್ಕೆ ಇಳಿಸಬೇಕು ಎನ್ನುವಂಥ ಒಂದು ಸರಳ ತಿದ್ದುಪಡಿ ಇದಾಗಿದೆ. ಏಕೆಂದರೆ ಇಂದು ಪ್ರತಿಯೊಂದು ಬ್ಯಾಂಕ್‌ಗಳಲ್ಲೂ ಬಡ್ಡಿಯ ದರ ಇಳಿದಿರತಕ್ಕಂಥ ಸಂದರ್ಭಗಳಲ್ಲಿ ನಾವು ಶೇಕಡ 11 ಪರ್ಸೆಂಟ್, 9 ಪರ್ಸೆಂಟ್, 13 ಪರ್ಸೆಂಟ್ ಒಳಗಾಗಿಯೇ ಈ ರೀತಿಯ ಬಡ್ಡಿಯನ್ನು ಕೊಡುತ್ತಿರುವ ಸೌಲಭ್ಯಗಳಿರುವುದರಿಂದ ನಾವು ಹೆಚ್ಚುವರಿ ಬಡ್ಡಿಯನ್ನು ಕೊಡತಕ್ಕಂಥದ್ದು ಸಾಧುವಾದುದಲ್ಲ ಎನ್ನುವ ಕಾರಣಕ್ಕಾಗಿಯೇ ಶೇಕಡ 15ರ ಬದಲು ಶೇಕಡ 9 ರಂತೆ ಬಡ್ಡಿ, ಶೇಕಡ 9 ರಂತೆ ಬಡ್ಡಿ ಎನ್ನುವ ಕಡೆ ಶೇಕಡ 6 ರಂತೆ ಬಡ್ಡಿ ಕೊಡಲು ಮಾಡಿರುವ ಸರಳವಾದ ತಿದ್ದುಪಡಿ ಇದಾಗಿದೆ. ಇದಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಇದಕ್ಕೆ ನಾವು ಸ್ಪಷ್ಟವಾಗಿ ವಿರೋಧ ಮಾಡುತ್ತೇವೆ. ಕಾರಣ, ರೈತರ ಲ್ಯಾಂಡ್‌ನ್ನು ಅಕ್ವೈರ್ ಮಾಡಿ ಅಡ್‌ಜ್ಯೂಡಿಕೇಶನ್ ಆಗಿ ಕೋರ್ಟ್ ತೀರ್ಮಾನವಾದ ಮೇಲೆ ಇವರು ಕೊಡಬೇಕಾಗಿರುವ ಪರಿಹಾರ. ಕೋರ್ಟ್‌ನಲ್ಲಿ ತೀರ್ಮಾನವಾಗಿ ತಾವು ಲ್ಯಾಂಡ್‌ನ್ನು ಪೊಸಿಶನ್‌ಗೆ ತೆಗೆದುಕೊಂಡ ಮೇಲೆ ತಕ್ಷಣ ದುಡ್ಡು ಕೊಡುವ ಜವಾಬ್ದಾರಿ ಸರ್ಕಾರದ್ದು. ತಾವು ಒಂದು ವರ್ಷದವರೆಗೆ ದುಡ್ಡನ್ನು ಕೊಡದಿದ್ದರೆ 9 ಪರ್ಸೆಂಟ್‌ನಷ್ಟು ಬಡ್ಡಿ ಕೊಡುವುದು, ವರ್ಷಕ್ಕೂ ಹೆಚ್ಚು ಮೀರಿದರೆ 15 ಪರ್ಸೆಂಟ್‌ನಷ್ಟು ಬಡ್ಡಿ ಕೊಡಬೇಕು ಎಂದು ಪ್ರಾವಿಶನ್ ಮಾಡಿರುವ ಉದ್ದೇಶವೇನೆಂದರೆ ಆದಷ್ಟ ಬೇಗ ರೈತರಿಗೆ ಪರಿಹಾರದ ಮೊತ್ತ ಸಿಗಲಿ ಎಂದು. ಲ್ಯಾಂಡ್ ಅಕ್ವೈರ್ ಮಾಡಿ ಕೋರ್ಟ್ ಡಿಸಿಶನ್ ಆಗಿ ಪೊಸಿಶನ್‌ಗೆ ತೆಗೆದುಕೊಂಡರೂ ಕೂಡ ನೀವು ಪರಿಹಾರದ ಮೊತ್ತವನ್ನು ಕೊಡದೇ ಹೋದರೆ ನೀವು ದುಡ್ಡು ಯಾವಾಗ ಕೊಡುತ್ತೀರಿ?